# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಸ್ಪೆಷಲ್ ಎನ್.ಡಿ.ಪಿ.ಎಸ್.06/2023

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಸುರೇಖಾ ರಾಯ್ಕರ | ಅಸಾ | : **03** |
| ತಂದೆಯ ಹೆಸರು | : | ಶ್ರೀಧರ | ಚಾಸಾ | : 15 |
| ವಯಸ್ಸು | : | 61 ವರ್ಷ | | |
| ಉದ್ಯೋಗ | : | ನಿವೃತ್ತ ಎ.ಎಸ್.ಐ. | | |
| ವಾಸ ಸ್ಥಳ | : | ಹಾವೇರಿ. | | |

ದಿನಾಂಕ: **05/08/2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ: –**

1. ಮಾರ್ಚ್-2017 ರಿಂದ ಮೇ-2024 ರವರೆಗೆ ನಾನು ಹಾವೇರಿಯ ಸಿ.ಇ.ಎನ್. ಕ್ರೈಂ ಪೊಲೀಸ ಠಾಣೆಯ ಮಹಿಳಾ ಎ.ಎಸ್.ಐ. ಎಂದು ಕೆಲಸ ಮಾಡಿದ್ದೇನೆ.

2. ದಿನಾಂಕ:09/08/2023 ರಂದು ಮಧ್ಯಾಹ್ನ 2.30 ಕ್ಕೆ ಚಾಸಾ-1 ಪಿ.ಐ.ರವರು ಸಲ್ಲಿಸಿದ ಗಣಕೀಕೃತ ದೂರು, ಪಂಚನಾಮೆ, ಮುದ್ದೆಮಾಲು ಮತ್ತು ಆರೋಪಿತರನ್ನು ಪಡೆದು ನಮ್ಮ ಠಾಣಾ ಗುನ್ನೆ ಸಂಖ್ಯೆ 66/2023 ರಲ್ಲಿ ಪ್ರಕರಣ ನೋಂದಾಯಿಸಿಕೊಂಡೆ. ದೂರು ಮತ್ತು ಪ್ರವರದಿಯನ್ನು ಈಗಾಗಲೇ ನಿಪಿ-19 ಮತ್ತು 20 ಎಂದು ಗುರುತಿಸಿದ್ದು, ನನ್ನ ಸಹಿಗಳನ್ನು ನಿಪಿ-19(ಬಿ) ಮತ್ತು ನಿಪಿ-20(ಬಿ) ಎಂದು ಗುರುತಿಸಲಾಯಿತು.

3. ಆರೋಪಿತರನ್ನು ದಸ್ತಗಿರಿ ಮಾಡಿ ವಿಚಾರಿಸಿ ಸ್ವಖುಷಿ ಹೇಳಿಕೆ ಪಡೆದು ನಿಯಮ ಪಾಲಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದೆ. ಸ್ವತ್ತುಪಟ್ಟಿ ಸಲ್ಲಿಸಿದೆ. ಚಾಸಾ-2, 3 ಮತ್ತು 8 ರಿಂದ 14 ರ ಹೇಳಿಕೆ ಪಡೆದೆ. ಚಾಸಾ-13 ರಿಂದ ಭಾ.ಸಾ.ಅ. ಕಲಂ.65 ಬಿ ಅಡಿಯಲ್ಲಿನ ಪ್ರಮಾಣ ಪತ್ರ ಪಡೆದೆ. ಸದರಿ ಪ್ರಮಾಣ ಪತ್ರವನ್ನು ಈಗ ನಿಪಿ-25 ಮತ್ತು ನನ್ನ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು.

4. ಶಫಿವುಲ್ಲಾ ಎನ್ನುವ ಬಾಲಕನ ಕಾನೂನು ಸಂಘರ್ಷಕ್ಕೆ ಒಳಗಾಗಿದ್ದಾನೆ ಎಂದು ಪ್ರ.ವ.ವರದಿಯಲ್ಲಿ ಅವನ ಹೆಸರು ಅಳವಡಿಸಿಕೊಳ್ಳಲು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದೆ. ದಿನಾಂಕ:21/08/2023 ರಂದು ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-16 ರಿಗೆ ಸಲ್ಲಿಸಿದೆ.

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಎಂ.ಎಂ.ಬಿ. ವಕೀಲರಿಂದಃ–**

(ಪ್ರಾಕ್ಸಿ ವಕೀಲರ ವಿನಂತಿ ಮೇರೆಗೆ ಸ್ವಲ್ಪ ಸಮಯದವರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.

(ಇಂದು ದಿನಾಂಕಃ **05/08/2026** ರಂದು ಸ್ವಲ್ಪ ಸಮಯದ ನಂತರ ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಎಂ.ಎಂ.ಬಿ. ವಕೀಲರಿಂದಃ–**

5. ಚಾಸಾ-1 ಯಾವುದೇ ದೂರು ಸಲ್ಲಿಸಿಲ್ಲ ಹಾಗೂ ಪಂಚನಾಮೆ, ಸ್ವತ್ತು ಮತ್ತು ಆರೋಪಿತರನ್ನು ಹಾಜರುಮಾಡಿಲ್ಲ ಎನ್ನುವುದು ಸುಳ್ಳು. ಚಾಸಾ-1 ರ ಮಾತು ಕೇಳಿ ಸುಳ್ಳು ಪ್ರಕರಣ ನೋಂದಾಯಿಸಿಕೊಂಡಿದ್ದೇನೆ ಎನ್ನುವುದು ಸುಳ್ಳು. ಆರೋಪಿತರನ್ನು ನಾನು ವಿಚಾರಣೆ ಮಾಡುವಾಗ ನಮ್ಮ ಸಿಬ್ಬಂದಿ ಹಾಜರಿದ್ದರು. ಆರೋಪಿತರು ಸ್ವಖುಷಿ ಹೇಳಿಕೆ ನೀಡಿಲ್ಲ ಎನ್ನುವುದು ಸುಳ್ಳು. ಚಾಸಾ-2, 3 ಮತ್ತು 8 ರಿಂದ 14 ನನ್ನ ಸಮಕ್ಷಮ ಹೇಳಿಕೆ ನೀಡಿಲ್ಲ ಎನ್ನುವುದು ಸುಳ್ಳು. ಚಾಸಾ-13 ನಿಪಿ-25 ಪ್ರಮಾಣ ಪತ್ರ ನೀಡಿಲ್ಲ ಎನ್ನುವುದು ಸುಳ್ಳು. ಚಾಸಾ-1 ರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.